# ಮಾದರಿ ಪ್ರಶ್ನೆಪತ್ರಿಕೆ ೩

ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ
ಗರಿಷ್ಠ ಅಂಕ: ೧೦೦ ಅವಧಿ : ೨.೪೫ ಗಂಟೆಗಳು

ಭಾಗ -'ಎ'

ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ . ೧೧*೧=೧೧

೧. ರಾಮಲಕ್ಷ್ಮಣರಿಗೆ ಮತಂಗಾಶ್ರಕ್ಕೆ ಹೋಗಲು ಸೂಚಿಸಿದವರು ಯಾರು ?
೨. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿಕೊಂಡರು ?
೩. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ ನೀಡಿದ ಪ್ರಶಸ್ತಿ ಯಾವುದು ?
೪. ಕನ್ನಡ ಸಾಹಿತ್ಯ ಪರಿಷತ್ತನ್ನು ವಿಶ್ವೇಶ್ವರಯ್ಯನವರು ಸ್ಥಾಪಿಸಿದುದರ ಕಾರಣವೇನು ?
೫. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?
೬. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?
೭. ಹಲಗಲಿಯ ನಾಲ್ವರು ಪ್ರಮುಖರು ಯಾರು ?
೮. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?
೯. ನಾಮ ಫಲಕ ಹೇಗಿರಬೇಕು ?
೧೦ ಕ್ರಿಯಾ ಸ್ವಾತಂತ್ರ್ಯವೆಂದರೇನು?
೧೧. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?

ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . ೯*೨=೧೮

೧೨. ಕಲೋಪಾಸಕನ ಕರ್ತವ್ಯ ಏನು ?
೧೩. ಗೃಹಸ್ಥಾಶ್ರಮವು ಧನ್ಯವೆಂದು ಹೇಗೆ ಹೇಳಬಹುದು ?
೧೪. ಧರ್ಮಸಮದೃಷ್ಟಿ ಪಠದಲ್ಲಿ ರಾಮಾನುಜಾಚಾರ್ಯರ ಗುಣ ವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ?
೧೫. ವಿಶ್ವೇಶ್ವರಯ್ಯನವರ ಸಾಧನೆಗೆ ಸಂದ ಪ್ರಶಸ್ತಿ ಗೌರವಗಳು ಯಾವುವು ?
೧೬. ಹಗ ನೆಂಟನ ಕುರಿತು ಅರ್ಥಶಾಸ್ತ್ರದಲ್ಲಿ ಏನು ಹೇಳಿದೆ ?
೧೭. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು ?
೧೮. ಹಲಗಲಿ ದಂಗೆಯ ಪರಿಣಾಮವೇನು ?
೧೯. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.
೨೦. ಒಗಟಿನ ವೈಶಿಷ್ಟ್ಯವನ್ನು ಒಂದು ಉದಾಹರಣೆಯೊಂದಿಗೆ ತಿಳಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨

೨೧. ''ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ''
೨೨.''ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ.”
೨೩. ''ಗೆರೆ ಎಳೆದು ಗಡಿ ಎಂದ ''
೨೪. ''ಅರಸುಗಳ ವಾಜಿಯಂ ಬಿಡು ''

Mamatabhagwat1@gmail.com

 ಈ ಸಾಹಿತಿಗಳ ಸ್ಥಳ ,ಕಾಲ , ಕೃತಿಗಳನ್ನು ಕುರಿತು ಬರೆಯಿರಿ.   ೨*೩ =೬
೨೫.ಎ .ಎನ್ . ಮೂರ್ತಿರಾವ್
೨೬. ದ.ರಾ.ಬೇಂದ್ರೆ

೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ        ೧*೪=೪
ಕೊರಳ ಸೆರೆ --------------------
--------------------------------
--------------------------------
---------------------------------
---------------------------
----------------------------ಚಿಂತಿಸಿದ
ಅಥವಾ
ಮಾರಿಗೌತಣ ----------
---------------------------
---------------------------
---------------------------
---------------------------
------------------ಸಖನಾಣೆ .

೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ .
೪*೧=೪

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ
ಪ್ರಶ್ನೆಗಳು :
೧.ಯಾವ ಎಚ್ಚರದಲ್ಲಿ ಬದುಕಬೇಕು ?
೨. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ?
೩.ಮತಗಳೆಲ್ಲವೂ ಪಥಗಳು ಎನ್ನುವುದರ ಭಾವವೇನು ?
೪.ಈ ನುಡಿಯಲ್ಲಿ ವ್ಯಕ್ತವಾದ ಆಶಯ ಯಾವುದು ?

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ . ೨*೪ =೮

೨೯ . ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು ?
ಅಥವಾ
ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು  ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ?

೩೦ .ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರ ದಾಸಿಮಯ್ಯನವರ ವಚನದಲ್ಲಿ ವ್ಯಕ್ತವಾದ ಅಂಶವನ್ನು ವಿವರಿಸಿ.
ಅಥವಾ
ಚಂಚಲ ಮನಸ್ಸಿನ ಸ್ವಭಾವದ ಕುರಿತು ಬಸವಣ್ಣನವರು ಏನು ಹೇಳಿದ್ದಾರೆ ವಿವರಿಸಿ.

೩೧.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪=೨+೨
ಆದಿತ್ಯೋದಯಮಾಗಲೊಡಂ ಧರ್ಮಬುದ್ಧಿ ದೇವಗುರು ದ್ವಿಜಪೂಜೆಗಳಂ ಮಾಡುತ್ತುಂ ತಡೆಯೆ ದುಷ್ಟಬುದ್ಧಿ ಮುಖಮಂ ತೊಳೆಯದೆ ಬಂದು ಧರ್ಮಾಧಿಕರಣಕ್ಕಿಂತೆಂದಂ- ಪ್ರತ್ಯರ್ಥಿ ಬಂದನಿಲ್ಲ ಪಿರಿದುಂ ಪೊಳ್ತು ಪೋದುದು ಎನಗೆ ಕರ್ತವ್ಯಮಾವುದೆಂದು ನುಡಿಯುತಿರ್ಪನ್ನೆಗಂ ,ಧರ್ಮಬುದ್ಧಿಯ ಬರವಂ ಕಂಡಾಕ್ಷಣದೊಳ್ ಧರ್ಮಾಧಿಕರಣರ್ ನಡೆಯಿಂ ನಿಮ್ಮಿರ್ವರ ಬವರಮಂ ತೀರ್ದುವಮೆಂದು ವಟವೃಕ್ಷದ ಸಮೀಪಕ್ಕೆ ವಂದಷ್ಟವಿಧಾರ್ಚನೆಯಿಂದರ್ಚಿಸಿ ತದನಂತರಮಾಯಿರ್ವರುಮಂ ನುಡಿಸಿ ಬಳಿಕ ಆ ಮರನನಿಂತೆಂದರ್
೧.ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರ ಸ್ವಭಾವದ ಭಿನ್ನತೆಯು ಮೇಲಿನ ಸಾರಾಂಶದಲ್ಲಿ ಹೇಗೆ ಬಿಂಬಿತವಾಗಿದೆ ?
೨.ಧರ್ಮಬುದ್ಧಿಯು ಬಂದ ನಂತರ ಧರ್ಮಾಧಿಕರಣರು ಏನು ಮಾಡಿದರು ?

## ಭಾಗ _ 'ಬಿ'

(ಅನ್ವಯಿಕ ವ್ಯಾಕರಣ ,ಅಲಂಕಾರ ,ಛಂದಸ್ಸು -೨೦ ಅಂಕಗಳು)
ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ .

೩೨. 'ಹುಕುಂ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ .---
ಎ) ಉರ್ದು ಬಿ)ಅರಬ್ಬೀ ಸಿ) ಹಿಂದೂಸ್ಥಾನಿ ಡಿ )ಫಾರ್ಸಿ
೩೩. 'ಮುಂಗೈ ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ------
ಎ) ಅಂಶಿ ಸಮಾಸ ಬಿ) ಕ್ರಿಯಾ ಸಮಾಸ ಸಿ)ದ್ವಂದ್ವಸಮಾಸ ಡಿ)ದ್ವಿಗುಸಮಾಸ
೩೪. 'ಸಂದೆಯ' ಪದದ ತತ್ಸಮ ರೂಪವಿದು-----
ಎ) ಸಂಶಯ ಬಿ)ಅನುಮಾನ ಸಿ)ಸಂದೇಹ ಡಿ ) ಸಂಧ್ಯಾ
೩೫. 'ಮೆಲ್ಲಮೆಲ್ಲನೆ 'ಎನ್ನುವುದು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.-----
ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಜೋಡುನುಡಿ ಡಿ)ನುಡಿಗಟ್ಟು
೩೬.ಕ್ರಿಯಾಪದದ ಮೂಲರೂಪವನ್ನು ಹೀಗೆ ಕರೆಯುತ್ತಾರೆ -----
ಎ) ಕೃದಂತ ಬಿ)ಸರ್ವನಾಮ ಸಿ) ಧಾತು ಡಿ )ವಿಭಕ್ತಿ
೩೭. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆಯನ್ನು ಹೀಗೆ ಕರೆಯುತ್ತಾರೆ.------
ಎ) ಆವರಣಚಿಹ್ನೆ ಬಿ)ವಿವರಣಾತ್ಮಕ ಚಿಹ್ನೆ ಸಿ)ವಾಕ್ಯವೇಷ್ಟನಚಿಹ್ನೆ ಡಿ)ಉದ್ಧರಣಚಿಹ್ನೆ
೩೮. ' ಕಾಣರು ' ಪದವು ಈ ಮಾದರಿಯ ಕ್ರಿಯಾಪದ ರೂಪದ ಉದಾಹರಣೆಯಾಗಿದೆ..
ಎ) ನಿಷೇಧಾರ್ಥಕ ಬಿ)ಸಂಭಾವನಾರ್ಥಕ ಸಿ) ವಿಧ್ಯರ್ಥಕ ಡಿ) ಸಾಮಾನ್ಯಾರ್ಥಕ

೩೯. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತೇವೆ.--------
ಎ) ಸಾಮಾನ್ಯವಾಕ್ಯ ಬಿ)ಸಂಯೋಜಿತ ವಾಕ್ಯ ಸಿ) ಮಿಶ್ರವಾಕ್ಯ ಡಿ) ಸಾಧಾರಣ ವಾಕ್ಯ

೪೦. 'ಸ್ಪರ್ಶಕೆ 'ಪದದಲ್ಲಿರುವ ವಿಭಕ್ತಿಯಿದು------
ಎ) ಚತುರ್ಥಿ ಬಿ)ಸಪ್ತಮಿ ಸಿ)ತೃತೀಯಾ ಡಿ)ಪಂಚಮಿ

೪೧.'ಹಣ್ಣುಹಂಪಲು' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ -----
ಎ)ನುಡಿಗಟ್ಟು ಬಿ)ಅನುಕರಣಾವ್ಯಯ ಸಿ) ದ್ವಿರುಕ್ತಿ ಡಿ) ಜೋಡುನುಡಿ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.೪*೧=೪

೪೨. ಮಂಡಳೇಶ್ವರ : ಗುಣ ಸಂಧಿ : : ಜಿನಾಲಯ : -----

೪೩. ಇಪ್ಪತ್ತು : ಸಂಖ್ಯಾವಾಚಕ : : ಇಪ್ಪತ್ತನೆಯ :-----

೪೪. ನಾನು : ಉತ್ತಮ ಪುರುಷ ಸರ್ವನಾಮ : : ನೀನು :------

೪೫. ಓಟ : ಕೃದಂತಭಾವನಾಮ : : ಹಿರಿಮೆ : -----

೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಮತಿಗೆಟ್ಟು ತಸ್ಕರಸ್ಯಾ
ನೃತಂ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ

ಅಥವಾ

ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ. ೧*೩=೩

''ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ''

ಅಥವಾ

''ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ ''

## ಭಾಗ -'ಸಿ'

(ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.)

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩

* ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ
* ಮನಸಿದ್ದರೆ ಮಾರ್ಗ
* ಬೆಳೆಯುವ ಸಿರಿ ಮೊಳಕೆಯಲ್ಲಿ

Mamatabhagwat1@gmail.com

೪೯. ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಕುರಿತು ದೂರದ ಊರಿನಲ್ಲಿರುವ ನಿಮ್ಮ ಸಹೋದರ ಅಥವಾ ಸಹೋದರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಕೊಪ್ಪಳದ ಗಂಗಾವತಿಯ ನಿವಾಸಿ ಎಂದು ಭಾವಿಸಿ ನಿಮ್ಮ ಊರಿಗೆ ಕುಡಿಯುವ ನೀರನ್ನು ಪೂರೈಸುವಂತೆ ಕೋರಿ ಜಲಮಂಡಳಿಯ ಅಧ್ಯಕ್ಷರಿಗೊಂದು ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

೧. ಅತಿವೃಷ್ಟಿಯಿಂದಾಗುವ ಹಾನಿಗಳು
೨. ನನ್ನ ನೆಚ್ಚಿನ ರಾಷ್ಟ್ರ ಪುರುಷ
೩. ಬಡತನ ನಿರ್ಮೂಲನ